رئاسة الشؤون الدينية
بالمسجد الحرام والمسجد النبوي

# ಇಸ್ಲಾಂ - ಸರ್ವಲೋಕಗಳ ಪರಿಪಾಲಕನ ಧರ್ಮ

ಕನ್ನಡ

كنادي

الإِسْلَامُ دِينُ رَبِّ العَالَمِينَ

ಮಸ್ಜಿದುಲ್-ಹರಾಮ್ ಮತ್ತು ಮಸ್ಜಿದು-ನ್ನಬವಿಯ
ಧಾರ್ಮಿಕ ವ್ಯವಹಾರಗಳ ಅಧ್ಯಕ್ಷತೆಯ
ಅಡಿಯಲ್ಲಿರುವ ವೈಜ್ಞಾನಿಕ ಸಮಿತಿ

الإِسْلَامُ دِينُ رَبِّ العَالَمِينَ

# ಇಸ್ಲಾಂ - ಸರ್ವಲೋಕಗಳ ಪರಿಪಾಲಕನ ಧರ್ಮ

اللَّجْنَةُ العِلْمِيَّةُ

بِرِئَاسَةِ الشُّؤُونِ الدِّينِيَّةِ بِالمَسْجِدِ الحَرَامِ وَالمَسْجِدِ النَّبَوِيِّ

ಮಸ್ಜಿದುಲ್-ಹರಾಮ್ ಮತ್ತು ಮಸ್ಜಿದು-ನ್ನಬವಿಯ ಧಾರ್ಮಿಕ ವ್ಯವಹಾರಗಳ ಅಧ್ಯಕ್ಷತೆಯ ಅಡಿಯಲ್ಲಿರುವ ವೈಜ್ಞಾನಿಕ ಸಮಿತಿ

بِسْمِ اللهِ الرَّحمَنِ الرَّحِيمِ

# ಇಸ್ಲಾಂ - ಸರ್ವಲೋಕಗಳ ಪರಿಪಾಲಕನ ಧರ್ಮ

## ಮಸ್ಜಿದುಲ್-ಹರಾಮ್ ಮತ್ತು ಮಸ್ಜಿದು-ನ್ನಬವಿಯ ಧಾರ್ಮಿಕ ವ್ಯವಹಾರಗಳ ಅಧ್ಯಕ್ಷತೆಯ ಅಡಿಯಲ್ಲಿರುವ ವೈಜ್ಞಾನಿಕ ಸಮಿತಿ

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

## ನಿನ್ನ ರಬ್ಬ್ (ಪರಿಪಾಲಕ) ಯಾರು?

ಇದು ಅಸ್ತಿತ್ವದಲ್ಲಿರುವ ಅತ್ಯಂತ ಮಹತ್ವದ ಪ್ರಶ್ನೆಯಾಗಿದೆ. ಮನುಷ್ಯನು ಇದರ ಉತ್ತರವನ್ನು ತಿಳಿದುಕೊಳ್ಳುವುದು ಅತ್ಯಂತ ಅವಶ್ಯಕ.

ನಮ್ಮ ರಬ್ಬ್ (ಪರಿಪಾಲಕ) ಯಾರೆಂದರೆ, ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸಿದವನು, ಆಕಾಶದಿಂದ ನೀರನ್ನು (ಮಳೆಯನ್ನು) ಸುರಿಸಿದವನು ಮತ್ತು ಅದರಿಂದ ಫಲಗಳನ್ನು ಹಾಗೂ ಮರಗಳನ್ನು ಉತ್ಪಾದಿಸಿ, ನಮಗೆ ಮತ್ತು ನಾವು ಆಹಾರವಾಗಿ ಸೇವಿಸುವ ಪ್ರಾಣಿಗಳಿಗೆ ಅನ್ನಾಧಾರವಾಗಿ ನೀಡಿದವನು.

ಅವನೇ ನಮ್ಮನ್ನು ಮತ್ತು ನಮ್ಮ ಪೂರ್ವಜರನ್ನು ಸೃಷ್ಟಿಸಿದವನು; ಮತ್ತು ಎಲ್ಲಾ ವಸ್ತುಗಳನ್ನೂ

ಸೃಷ್ಟಿಸಿದವನು. ಅವನೇ ರಾತ್ರಿ ಮತ್ತು ಹಗಲನ್ನು ಮಾಡಿದವನು. ಅವನೇ ರಾತ್ರಿಯನ್ನು ನಿದ್ರೆ ಮತ್ತು ವಿಶ್ರಾಂತಿಗಾಗಿ ಮತ್ತು ಹಗಲನ್ನು ಜೀವನೋಪಾಯವನ್ನು ಹುಡುಕುವುದಕ್ಕಾಗಿ ಮಾಡಿದವನು.

ಅವನೇ ನಮಗಾಗಿ ಸೂರ್ಯ, ಚಂದ್ರ, ನಕ್ಷತ್ರಗಳು ಮತ್ತು ಸಮುದ್ರಗಳನ್ನು ಅಧೀನಗೊಳಿಸಿದವನು; ಮತ್ತು ನಮಗಾಗಿ ಪ್ರಾಣಿಗಳನ್ನು ಅಧೀನಗೊಳಿಸಿದವನು. ನಾವು ಅವುಗಳನ್ನು ತಿನ್ನುತ್ತೇವೆ ಮತ್ತು ಅವುಗಳ ಹಾಲು ಹಾಗೂ ಉಣ್ಣೆಯಿಂದ ಪ್ರಯೋಜನ ಪಡೆಯುತ್ತೇವೆ.

## ಸರ್ವಲೋಕಗಳ ರಬ್ಬ್ (ಪರಿಪಾಲಕ)ನ ಗುಣಲಕ್ಷಣಗಳೇನು?

ರಬ್ಬ್ (ಪರಿಪಾಲಕ) ಯಾರೆಂದರೆ ಸೃಷ್ಟಿಗಳನ್ನು ಸೃಷ್ಟಿಸಿದವನು. ಅವನೇ ಅವುಗಳಿಗೆ ಸತ್ಯ ಮತ್ತು ಮಾರ್ಗದರ್ಶನದ ಕಡೆಗೆ ದಾರಿ ತೋರಿಸುವವನು. ಅವನೇ ಎಲ್ಲಾ ಜೀವಿಗಳ ವ್ಯವಹಾರಗಳನ್ನು (ಬೇಕು-ಬೇಡಗಳನ್ನು) ನಿರ್ವಹಿಸುವವನು ಮತ್ತು ಅವುಗಳಿಗೆ ಆಹಾರವನ್ನು ಒದಗಿಸುವವನು. ಇಹಲೋಕ ಮತ್ತು ಪರಲೋಕದಲ್ಲಿರುವ ಎಲ್ಲದರ ಮಾಲೀಕನು ಅವನೇ. ಎಲ್ಲಾ ವಸ್ತುಗಳೂ ಅವನ ಒಡೆತನದಲ್ಲಿದೆ ಮತ್ತು ಅವನ ಹೊರತಾದ ಎಲ್ಲವೂ ಅವನ ಅಧೀನದಲ್ಲಿವೆ.

ಅವನು ಚಿರಂಜೀವಿಯಾಗಿದ್ದು, ಮರಣ ಹೊಂದುವುದಿಲ್ಲ ಅಥವಾ ನಿದ್ರಿಸುವುದಿಲ್ಲ. ಅವನು ಸ್ವಯಂ ಅಸ್ತಿತ್ವದಲ್ಲಿರುವವನು ಮತ್ತು ಪ್ರತಿಯೊಂದು

ಜೀವಿಯೂ ಅವನ ಆಜ್ಞೆಯಿಂದಲೇ ಅಸ್ತಿತ್ವದಲ್ಲಿದೆ. ಅವನ ಕರುಣೆಯೂ ಎಲ್ಲವನ್ನೂ ಆವರಿಸಿಕೊಂಡಿದೆ. ಭೂಮಿಯಲ್ಲಾಗಲಿ, ಆಕಾಶದಲ್ಲಾಗಲಿ ಯಾವುದೂ ಅವನಿಂದ ಮರೆಯಾಗಿಲ್ಲ.

ಅವನಿಗೆ ಹೋಲಿಕೆಯಾಗಿ ಯಾವುದೂ ಇಲ್ಲ. ಅವನು ಎಲ್ಲವನ್ನೂ ಕೇಳುವವನು ಮತ್ತು ನೋಡುವವನಾಗಿದ್ದಾನೆ. ಅವನು ಆಕಾಶಗಳ ಮೇಲಿದ್ದಾನೆ. ಅವನಿಗೆ ತನ್ನ ಸೃಷ್ಟಿಗಳ ಅಗತ್ಯವಿಲ್ಲ. ಆದರೆ ಸೃಷ್ಟಿಗಳು ಅವನ ಅಗತ್ಯವುಳ್ಳವರಾಗಿದ್ದಾರೆ. ಅವನು ತನ್ನ ಸೃಷ್ಟಿಯಲ್ಲಿ ಲೀನವಾಗುವುದಿಲ್ಲ. ಅವನ ಸೃಷ್ಟಿಯಲ್ಲಿ ಯಾವುದೂ ಅವನ ಅಸ್ತಿತ್ವದಲ್ಲಿ ಲೀನವಾಗುವುದಿಲ್ಲ. ಅವನು ಯಾವುದೇ ನ್ಯೂನತೆಗಳಿಲ್ಲದ ಪರಮ ಪಾವನನು ಮತ್ತು ಅತ್ಯುನ್ನತನು.

ರಬ್ಬ್ (ಪರಿಪಾಲಕ) ಯಾರೆಂದರೆ ಈ ಗೋಚರ ಜಗತ್ತನ್ನು ಅದರ ಸಮತೋಲಿತ, ಎಂದಿಗೂ ವ್ಯತ್ಯಾಸಗೊಳ್ಳದ ವ್ಯವಸ್ಥೆಗಳೊಂದಿಗೆ ಸೃಷ್ಟಿಸಿದವನು. ಅದು ಮಾನವ ಮತ್ತು ಪ್ರಾಣಿಗಳ ದೇಹದ ವ್ಯವಸ್ಥೆಗಳಾಗಿರಲಿ, ಅಥವಾ ನಮ್ಮ ಸುತ್ತಲಿನ ಬ್ರಹ್ಮಾಂಡದಲ್ಲಿರುವ ಸೂರ್ಯ, ನಕ್ಷತ್ರಗಳು ಮತ್ತು ಇತರ ಘಟಕಗಳ ವ್ಯವಸ್ಥೆಗಳಾಗಿರಲಿ (ಎಲ್ಲವನ್ನೂ ಅವನು ವ್ಯವಸ್ಥಿತವಾಗಿಯೇ ಸೃಷ್ಟಿಸಿದ್ದಾನೆ).

ಅವನ ಹೊರತಾಗಿ ಆರಾಧಿಸಲಾಗುವ ಯಾವುದೂ ಸ್ವಯಂ ಲಾಭವನ್ನಾಗಲಿ, ನಷ್ಟವನ್ನಾಗಲಿ ಮಾಡುವ ಶಕ್ತಿಯನ್ನು ಹೊಂದಿಲ್ಲ. ಹೀಗಿರುವಾಗ, ತಮ್ಮನ್ನು

ಆರಾಧಿಸುವವನಿಗೆ ಲಾಭವನ್ನು ತಂದುಕೊಡಲು ಅಥವಾ ಅವನಿಂದ ನಷ್ಟವನ್ನು ದೂರಮಾಡಲು ಅವುಗಳಿಗೆ ಹೇಗೆ ಸಾಧ್ಯ?

## ನಮ್ಮ ಮೇಲೆ ನಮ್ಮ ಪರಿಪಾಲಕನಿಗೆ ಇರುವ ಹಕ್ಕು ಏನು?

ಸರ್ವ ಮನುಷ್ಯರ ಮೇಲೆ ಅವನಿಗೆ ಇರುವ ಹಕ್ಕು ಏನೆಂದರೆ, ಅವರು ಅವನನ್ನು ಮಾತ್ರ ಆರಾಧಿಸಬೇಕು ಮತ್ತು ಅವನೊಂದಿಗೆ ಯಾವುದನ್ನೂ ಏನನ್ನೂ ಸಹಭಾಗಿಯನ್ನಾಗಿ ಮಾಡಬಾರದು. ಆದ್ದರಿಂದ ಅವರು ಅವನನ್ನು ಬಿಟ್ಟು ಅಥವಾ ಅವನ ಜೊತೆಗೆ ಯಾವುದೇ ಮನುಷ್ಯನನ್ನು, ಕಲ್ಲನ್ನು, ನದಿಯನ್ನು, ನಿರ್ಜೀವ ವಸ್ತುವನ್ನು, ಗ್ರಹವನ್ನು ಅಥವಾ ಬೇರೆ ಯಾವುದನ್ನೂ ಆರಾಧಿಸಬಾರದು. ಬದಲಿಗೆ, ಆರಾಧನೆಯನ್ನು ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ ಮಾತ್ರ ಮೀಸಲಾಗಿಡಬೇಕು.

## ಮನುಷ್ಯರಿಗೆ ತಮ್ಮ ಪರಿಪಾಲಕನ ಮೇಲೆ ಇರುವ ಹಕ್ಕು ಏನು?

ಮನುಷ್ಯರಿಗೆ ಅಲ್ಲಾಹನ ಮೇಲಿರುವ ಹಕ್ಕು ಏನೆಂದರೆ, ಅವರು ಅವನನ್ನು ಮಾತ್ರ ಆರಾಧಿಸಿದರೆ, ಅವರಿಗೆ ಭದ್ರತೆ, ಸುರಕ್ಷತೆ, ಶಾಂತಿ, ನೆಮ್ಮದಿ ಮತ್ತು ತೃಪ್ತಿಕರವಾದ ಉತ್ತಮ ಜೀವನವನ್ನು ನೀಡುವುದು. ಹಾಗೆಯೇ, ಪರಲೋಕದಲ್ಲಿ ಅವರನ್ನು ಸ್ವರ್ಗಕ್ಕೆ ಸೇರಿಸುವುದು—ಅಲ್ಲಿ ಅವರಿಗೆ ಶಾಶ್ವತವಾದ ಸುಖ ಮತ್ತು ಅನಂತವಾದ ಜೀವನವಿರುತ್ತದೆ. ಒಂದು ವೇಳೆ

ಅವರು ಅವನಿಗೆ ಅವಿಧೇಯರಾಗಿ ನಡೆದುಕೊಂಡು ಅವನ ಆಜ್ಞೆಯನ್ನು ಉಲ್ಲಂಘಿಸಿದರೆ, ಅವರು ಸುಖ ಮತ್ತು ಆರಾಮದಲ್ಲಿದ್ದೇವೆಂದು ಭಾವಿಸಿದರೂ ಸಹ ಅವರ ಜೀವನವನ್ನು ದುಃಖ ಮತ್ತು ಸಂಕಟದಿಂದ ಕೂಡಿರುವಂತೆ ಮಾಡುವುದು. ಹಾಗೆಯೇ, ಪರಲೋಕದಲ್ಲಿ ಅವರನ್ನು ನರಕಕ್ಕೆ ಸೇರಿಸುವುದು. ಅಲ್ಲಿಂದ ಅವರು ಎಂದಿಗೂ ಹೊರಬರುವುದಿಲ್ಲ. ಅವರಿಗೆ ಅಲ್ಲಿ ಶಾಶ್ವತವಾದ ಶಿಕ್ಷೆ ಮತ್ತು ಅನಂತವಾದ ವಾಸವಿರುತ್ತದೆ.

## ನಮ್ಮ ಅಸ್ತಿತ್ವದ ಉದ್ದೇಶವೇನು? ನಮ್ಮನ್ನು ಏಕೆ ಸೃಷ್ಟಿಸಲಾಯಿತು?

ನಮ್ಮನ್ನು ಒಂದು ಶ್ರೇಷ್ಠ ಉದ್ದೇಶಕ್ಕಾಗಿ ಸೃಷ್ಟಿಸಿರುವುದಾಗಿ ನಮ್ಮ ಪರಿಪಾಲಕನು ನಮಗೆ ತಿಳಿಸಿದ್ದಾನೆ. ಅದೇನೆಂದರೆ, ನಾವು ಅವನನ್ನು ಮಾತ್ರ ಆರಾಧಿಸುವುದು ಮತ್ತು ಅವನೊಂದಿಗೆ ಯಾವುದನ್ನೂ ಸಹಭಾಗಿಯಾಗಿ ಮಾಡದಿರುವುದು. ಭೂಮಿಯನ್ನು ಒಳಿತು ಮತ್ತು ಸುಧಾರಣೆಯಿಂದ ಅಭಿವೃದ್ಧಿಪಡಿಸುವ ಜವಾಬ್ದಾರಿಯನ್ನು ಅವನು ನಮಗೆ ವಹಿಸಿದ್ದಾನೆ. ಯಾರು ತನ್ನ ಪರಿಪಾಲಕ ಮತ್ತು ತನ್ನ ಸೃಷ್ಟಿಕರ್ತನನ್ನು ಬಿಟ್ಟು ಬೇರೆಯವರನ್ನು ಆರಾಧಿಸುತ್ತಾನೋ, ಅವನು ತನ್ನನ್ನು ಸೃಷ್ಟಿಸಿದ (ನಿಜವಾದ) ಉದ್ದೇಶವನ್ನು ಅರಿತಿಲ್ಲ ಮತ್ತು ತನ್ನ ಸೃಷ್ಟಿಕರ್ತನಿಗೆ ನಿರ್ವಹಿಸಬೇಕಾದ ತನ್ನ ಕರ್ತವ್ಯವನ್ನು ಪೂರೈಸಿಲ್ಲ ಎಂದರ್ಥ. ಯಾರು ಭೂಮಿಯಲ್ಲಿ ಅಶಾಂತಿಯನ್ನು ಹರಡುತ್ತಾನೋ,

ಅವನು ತನಗೆ ವಹಿಸಲಾದ ಕರ್ತವ್ಯವನ್ನು ತಿಳಿದಿಲ್ಲ ಎಂದರ್ಥ.

## ನಾವು ನಮ್ಮ ಪರಿಪಾಲಕನನ್ನು ಹೇಗೆ ಆರಾಧಿಸಬೇಕು?

ಮಹೋನ್ನತನಾದ ಆ ಪರಿಪಾಲಕನು ನಮ್ಮನ್ನು ಸೃಷ್ಟಿಸಿ ಹಾಗೆಯೇ ಬಿಟ್ಟುಬಿಟ್ಟಿಲ್ಲ. ಅವನು ನಮ್ಮ ಜೀವನವನ್ನು ನಿರರ್ಥಕಗೊಳಿಸಿಲ್ಲ. ಬದಲಿಗೆ, ಮಾನವರಿಂದಲೇ ಅವರ ಜನಾಂಗಗಳಿಗೆ ಸಂದೇಶವಾಹಕರನ್ನು (ಪ್ರವಾದಿಗಳನ್ನು) ಆಯ್ಕೆ ಮಾಡಿದನು. ಅವರು ನಡವಳಿಕೆಯಲ್ಲಿ ಅತ್ಯಂತ ಪರಿಪೂರ್ಣರು, ಆತ್ಮದಲ್ಲಿ ಅತ್ಯಂತ ಪರಿಶುದ್ಧರು ಮತ್ತು ಹೃದಯದಲ್ಲಿ ಅತ್ಯಂತ ಪವಿತ್ರರು. ಅವನು ಅವರಿಗೆ ತನ್ನ ಸಂದೇಶಗಳನ್ನು ಅವತೀರ್ಣಗೊಳಿಸಿದನು. ಅದರಲ್ಲಿ, ಪರಿಪಾಲಕನ ಬಗ್ಗೆ ಮತ್ತು ಪುನರುತ್ಥಾನ ದಿನದಂದು ಜನರನ್ನು ಮತ್ತೆ ಜೀವಂತಗೊಳಿಸುವ ಬಗ್ಗೆ ಜನರು ತಿಳಿದುಕೊಳ್ಳಬೇಕಾದ ಎಲ್ಲವನ್ನೂ ಸೇರಿಸಿದನು. ಅದು ವಿಚಾರಣೆ ಮಾಡುವ ಮತ್ತು ಪ್ರತಿಫಲ ನೀಡುವ ದಿನವಾಗಿದೆ.

ಸಂದೇಶವಾಹಕರು (ಪ್ರವಾದಿಗಳು) ತಮ್ಮ ಜನಾಂಗಗಳಿಗೆ ತಮ್ಮ ಪರಿಪಾಲಕನನ್ನು ಹೇಗೆ ಆರಾಧಿಸಬೇಕೆಂದು ತಿಳಿಸಿದರು. ಅವರು ಆರಾಧನೆಗಳ ವಿಧಾನಗಳು, ಸಮಯಗಳು ಮತ್ತು ಇಹಲೋಕ ಹಾಗೂ ಪರಲೋಕದಲ್ಲಿ ಅವುಗಳ ಪ್ರತಿಫಲವನ್ನು ವಿವರಿಸಿದರು. ತಮ್ಮ ಪರಿಪಾಲಕನು ನಿಷೇಧಿಸಿದ

ಆಹಾರ, ಪಾನೀಯ ಮತ್ತು ಲೈಂಗಿಕತೆಯ ಬಗ್ಗೆ ಅವರು ಎಚ್ಚರಿಸಿದರು. ಅವರು ಜನರಿಗೆ ಉತ್ತಮ ನಡವಳಿಕೆಯನ್ನು ತೋರಿಸಿಕೊಟ್ಟರು ಮತ್ತು ಕೆಟ್ಟ ನಡತೆಯಿಂದ ತಡೆದರು.

## ಪರಿಪಾಲಕನ ಬಳಿ ಸ್ವೀಕಾರಾರ್ಹ ಧರ್ಮ ಯಾವುದು?

ಅಲ್ಲಾಹನ ಬಳಿ ಸ್ವೀಕಾರಾರ್ಹವಾದ ಧರ್ಮವೆಂದರೆ ಇಸ್ಲಾಂ ಮಾತ್ರ. ಇದು ಎಲ್ಲಾ ಪ್ರವಾದಿಗಳು ಬೋಧಿಸಿದ ಧರ್ಮವಾಗಿದೆ. ಪುನರುತ್ಥಾನ ದಿನದಂದು ಅಲ್ಲಾಹು ಇದನ್ನು ಹೊರತುಪಡಿಸಿ ಬೇರೆ ಯಾವುದೇ ಧರ್ಮವನ್ನು ಸ್ವೀಕರಿಸುವುದಿಲ್ಲ. ಜನರು ಅನುಸರಿಸುವ ಇಸ್ಲಾಂ ಅಲ್ಲದ ಪ್ರತಿಯೊಂದು ಧರ್ಮವೂ ನಿರರ್ಥಕವಾಗಿದೆ. ಅದರ ಅನುಯಾಯಿಗೆ ಅದು ಯಾವುದೇ ಪ್ರಯೋಜನವನ್ನು ನೀಡುವುದಿಲ್ಲ. ಬದಲಿಗೆ ಇಹಲೋಕ ಮತ್ತು ಪರಲೋಕದಲ್ಲಿ ಅದು ಅವನ ದೌರ್ಭಾಗ್ಯಕ್ಕೆ ಕಾರಣವಾಗುತ್ತದೆ.

## ಇಸ್ಲಾಂ ಧರ್ಮದ ಮೂಲಭೂತ ತತ್ವಗಳು ಮತ್ತು ಆಧಾರಸ್ತಂಭಗಳು ಯಾವುವು?

ಅಲ್ಲಾಹು ಈ ಧರ್ಮವನ್ನು ತನ್ನ ದಾಸರಿಗೆ ಸುಲಭಗೊಳಿಸಿದ್ದಾನೆ. ಅದರ ಮಹಾನ್ ಆಧಾರಸ್ತಂಭಗಳೆಂದರೆ: ಅಲ್ಲಾಹನನ್ನು ರಬ್ಬ್ (ಪರಿಪಾಲಕ), ದೇವರು ಮತ್ತು ಆರಾಧ್ಯನೆಂದು ವಿಶ್ವಾಸವಿಡುವುದು; ಅವನ ದೇವದೂತರುಗಳಲ್ಲಿ,

ಅವನ ಗ್ರಂಥಗಳಲ್ಲಿ, ಅವನ ಸಂದೇಶವಾಹಕರಲ್ಲಿ, ಅಂತಿಮ ದಿನದಲ್ಲಿ ಮತ್ತು ವಿಧಿಬರಹದಲ್ಲಿ ವಿಶ್ವಾಸವಿಡುವುದು. ಅಂದರೆ, "ಅಲ್ಲಾಹನಲ್ಲದೆ ಆರಾಧನೆಗೆ ಅರ್ಹರಾದ ಬೇರೆ ಆರಾಧ್ಯರಿಲ್ಲ ಮತ್ತು ಮುಹಮ್ಮದ್ ಅಲ್ಲಾಹನ ಸಂದೇಶವಾಹಕರು" ಎಂದು ಸಾಕ್ಷಿ ನುಡಿಯುವುದು; ನಮಾಝ್ ಸಂಸ್ಥಾಪಿಸುವುದು; ನಿಮ್ಮ ಬಳಿ ಝಕಾತ್ (ಕಡ್ಡಾಯ ದಾನ) ನೀಡಬೇಕಾದಷ್ಟು ಸಂಪತ್ತು ಇದ್ದರೆ ಝಕಾತ್ ನೀಡುವುದು; ರಮದಾನ್ ತಿಂಗಳಲ್ಲಿ (ವರ್ಷದ 9ನೇ ತಿಂಗಳು) ಉಪವಾಸವಿರುವುದು; ಮತ್ತು ಸಾಧ್ಯವಾದರೆ ಅಲ್ಲಾಹನಿಗಾಗಿ, ಅವನ ಆಜ್ಞೆಯ ಮೇರೆಗೆ ಇಬ್ರಾಹೀಮ್ (ಅ) ನಿರ್ಮಿಸಿದ ಪ್ರಾಚೀನ ಮನೆಗೆ (ಕಅಬಾಲಯ) ಹಜ್ಜ್ (ತೀರ್ಥಯಾತ್ರೆ) ಮಾಡುವುದು.

ಅಲ್ಲಾಹನು ನಿಷೇಧಿಸಿದ ಶಿರ್ಕ್ (ಬಹುದೇವಾರಾಧನೆ), ನರಹತ್ಯೆ, ವ್ಯಭಿಚಾರ, ಅಕ್ರಮವಾಗಿ (ಇತರರ) ಸಂಪತ್ತು ಕಬಳಿಸುವುದು, ತಂದೆ-ತಾಯಿಗಳಿಗೆ ಅವಿಧೇಯತೆ ತೋರುವುದು ಮದ್ಯಪಾನ ಮುಂತಾದವುಗಳನ್ನು ತ್ಯಜಿಸುವುದು. ಹೀಗೆ ಮಾಡುವುದರಿಂದ ನೀವು ಇಹಲೋಕದಲ್ಲಿ ನೆಮ್ಮದಿ, ಸಂತೋಷ ಮತ್ತು ಯಶಸ್ಸನ್ನು ಪಡೆಯುತ್ತೀರಿ, ಹಾಗೂ ಪುನರುತ್ಥಾನ ದಿನದಂದು ಅಲ್ಲಾಹು ನಿಮಗೆ ಸ್ವರ್ಗದಲ್ಲಿ ಶಾಶ್ವತವಾದ ಸುಖ ಮತ್ತು ಅನಂತವಾದ ಜೀವನವನ್ನು ಕರುಣಿಸುವನು.

## ಇಸ್ಲಾಂ ಒಂದು ನಿರ್ದಿಷ್ಟ ಜನಾಂಗ ಅಥವಾ ಕುಲಕ್ಕೆ ಸೇರಿದ ಧರ್ಮವೇ?

ಇಸ್ಲಾಂ ಎಲ್ಲಾ ಜನರಿಗಾಗಿ ಇರುವ ಅಲ್ಲಾಹನ ಧರ್ಮವಾಗಿದೆ. ಇದರಲ್ಲಿ ಯಾರಿಗೂ ಯಾರ ಮೇಲೆಯೂ ಶ್ರೇಷ್ಠತೆಯಿಲ್ಲ—ದೇವಭಯ ಮತ್ತು ಸತ್ಕರ್ಮಗಳ ಆಧಾರದಲ್ಲೇ ಹೊರತು. ಇದರಲ್ಲಿ ಎಲ್ಲಾ ಜನರೂ ಸಮಾನರು.

## ಜನರು ಪ್ರವಾದಿಗಳ (ಅವರ ಮೇಲೆ ಶಾಂತಿಯಿರಲಿ) ಸತ್ಯಸಂಧತೆಯನ್ನು ತಿಳಿಯುವುದು ಹೇಗೆ?

ಜನರು ಹಲವಾರು ವಿಧಾನಗಳಿಂದ ಪ್ರವಾದಿಗಳ ಸತ್ಯಸಂಧತೆಯನ್ನು ತಿಳಿಯಬಹುದು. ಅವು:

ಅವರು ತರುವ ಸತ್ಯ ಮತ್ತು ಮಾರ್ಗದರ್ಶನವನ್ನು ವಿವೇಕಯುತ ಮನಸ್ಸುಗಳು ಮತ್ತು ಸ್ವಚ್ಛ ಪ್ರಕೃತಿಗಳು ಒಪ್ಪಿಕೊಳ್ಳುತ್ತವೆ ಮತ್ತು ಅದರ ಒಳಿತಿಗೆ ಸಾಕ್ಷಿ ನುಡಿಯುತ್ತವೆ. ಅವರು ತಂದಂತಹ ವಿಷಯವನ್ನು ತರಲು ಪ್ರವಾದಿಗಳಲ್ಲದವರಿಗೆ ಸಾಧ್ಯವಿಲ್ಲ.

ಪ್ರವಾದಿಗಳು ತಂದಿರುವುದರಲ್ಲಿ ಜನರ ಧಾರ್ಮಿಕ ಮತ್ತು ಲೌಕಿಕ ಜೀವನದ ಒಳಿತು, ಅವರ ವ್ಯವಹಾರಗಳ ಸುಸ್ಥಿರತೆ, ಅವರ ನಾಗರಿಕತೆಯ ನಿರ್ಮಾಣ, ಮತ್ತು ಅವರ ಧರ್ಮ, ಬುದ್ಧಿಶಕ್ತಿ, ಸಂಪತ್ತು ಮತ್ತು ಗೌರವದ ರಕ್ಷಣೆ ಇದೆ.

ಪ್ರವಾದಿಗಳು (ಅವರ ಮೇಲೆ ಶಾಂತಿಯಿರಲಿ) ಜನರಿಗೆ ಒಳಿತು ಮತ್ತು ಮಾರ್ಗದರ್ಶನದ ದಾರಿ

ತೋರಿಸಿದ್ದಕ್ಕಾಗಿ ಅವರಿಂದ ಯಾವುದೇ ಪ್ರತಿಫಲವನ್ನು ಕೇಳುವುದಿಲ್ಲ. ಬದಲಿಗೆ ಅವರು ತಮ್ಮ ಪರಿಪಾಲಕನಿಂದ (ಅಲ್ಲಾಹನಿಂದ) ಪ್ರತಿಫಲವನ್ನು ನಿರೀಕ್ಷಿಸುತ್ತಾರೆ.

ಪ್ರವಾದಿಗಳು ತಂದಿರುವುದು ಸತ್ಯ ಮತ್ತು ನಿಶ್ಚಿತವಾಗಿದ್ದು, ಅದರಲ್ಲಿ ಯಾವುದೇ ಸಂದೇಹವಿರುವುದಿಲ್ಲ, ವಿರೋಧಾಭಾಸ ಅಥವಾ ಗೊಂದಲವಿರುವುದಿಲ್ಲ. ಪ್ರತಿಯೊಬ್ಬ ಪ್ರವಾದಿಯೂ ಹಿಂದಿನ ಪ್ರವಾದಿಗಳನ್ನು ಸತ್ಯವೆಂದು ಒಪ್ಪಿಕೊಳ್ಳುತ್ತಾರೆ ಮತ್ತು ಅವರು ಬೋಧಿಸಿದ್ದನ್ನೇ ಬೋಧಿಸುತ್ತಾರೆ.

ಅಲ್ಲಾಹು ಪ್ರವಾದಿಗಳನ್ನು (ಅವರ ಮೇಲೆ ಶಾಂತಿಯಿರಲಿ) ಸ್ಪಷ್ಟ ನಿದರ್ಶನಗಳು ಮತ್ತು ಪ್ರಬಲ ಪವಾಡಗಳ ಮೂಲಕ ಬೆಂಬಲಿಸುತ್ತಾನೆ. ಅವರು ಅಲ್ಲಾಹನ ಕಡೆಯಿಂದ ಕಳುಹಿಸಲ್ಪಟ್ಟ ಸಂದೇಶವಾಹಕರು ಎಂಬುದಕ್ಕೆ ಸಾಕ್ಷಿಯಾಗಿ ಈ ಪವಾಡಗಳು ಅವರ ಕೈಗಳಿಂದ ಜರುಗುವಂತೆ ಮಾಡುತ್ತಾನೆ. ಪ್ರವಾದಿಗಳ ಪವಾಡಗಳಲ್ಲಿ ಅತ್ಯಂತ ಮಹತ್ವದ ಪವಾಡವೆಂದರೆ ಅಂತಿಮ ಪ್ರವಾದಿ ಮುಹಮ್ಮದ್ (ಸ) ರವರ ಪವಾಡವಾಗಿದೆ. ಅದುವೇ ಪವಿತ್ರ ಕುರ್‌ಆನ್.

## ಪವಿತ್ರ ಕುರ್‌ಆನ್ ಎಂದರೇನು?

ಪವಿತ್ರ ಕುರ್‌ಆನ್ ಸರ್ವಲೋಕಗಳ ಪರಿಪಾಲಕನ ಗ್ರಂಥವಾಗಿದೆ. ಇದು ಅಲ್ಲಾಹನ ವಾಣಿಯಾಗಿದ್ದು, ಇದನ್ನು ದೇವದೂತರಾದ ಜಿಬ್ರೀಲ್ (ಗೇಬ್ರಿಯೇಲ್)

ಮೂಲಕ ಪ್ರವಾದಿ ಮುಹಮ್ಮದ್ (ಸ) ರಿಗೆ ಅವತೀರ್ಣಗೊಳಿಸಲಾಗಿದೆ. ಇದರಲ್ಲಿ ಮನುಷ್ಯರು ತಿಳಿದುಕೊಳ್ಳಬೇಕಾದ ಅಲ್ಲಾಹು, ಅವನ ದೇವದೂತರು, ಅವನ ಗ್ರಂಥಗಳು, ಅವನ ಸಂದೇಶವಾಹಕರು, ಅಂತಿಮ ದಿನ ಮತ್ತು ವಿಧಿಯ ಒಳಿತು ಮತ್ತು ಕೆಡುಕುಗಳಿಗೆ ಸಂಬಂಧಿಸಿದ ಎಲ್ಲಾ ಜ್ಞಾನಗಳೂ ಇವೆ.

ಇದರಲ್ಲಿ ಕಡ್ಡಾಯ ಆರಾಧನೆಗಳು, ಎಚ್ಚರಿಕೆ ವಹಿಸಬೇಕಾದ ನಿಷಿದ್ಧ ವಿಷಯಗಳು, ಶ್ರೇಷ್ಠ ಮತ್ತು ನಿಂದನೀಯ ನಡತೆಗಳು ಹಾಗೂ ಜನರ ಧಾರ್ಮಿಕ, ಲೌಕಿಕ ಮತ್ತು ಪಾರತ್ರಿಕ ವಿಷಯಗಳಿಗೆ ಸಂಬಂಧಿಸಿದ ಎಲ್ಲವೂ ಇದೆ. ಇದು ಒಂದು ಪವಾಡ ಸದೃಶ ಗ್ರಂಥವಾಗಿದ್ದು, ಇದರಂತಹುದನ್ನು ತರಲು ಅಲ್ಲಾಹು ಜನರಿಗೆ ಸವಾಲು ಹಾಕಿದ್ದಾನೆ. ಇದು ಪುನರುತ್ಥಾನ ದಿನದವರೆಗೆ, ಅದು ಅವತೀರ್ಣಗೊಂಡ ಭಾಷೆಯಲ್ಲಿಯೇ ಸಂರಕ್ಷಿಸಲ್ಪಡುವ ಗ್ರಂಥವಾಗಿದೆ. ಅದರಿಂದ ಒಂದಕ್ಷರವೂ ಕಡಿಮೆಯಾಗಿಲ್ಲ, ಅಥವಾ ಒಂದು ಪದವೂ ಬದಲಾವಣೆಗೊಂಡಿಲ್ಲ.

## ಪುನರುತ್ಥಾನ ಮತ್ತು ವಿಚಾರಣೆಗೆ ಪುರಾವೆ ಏನು?

ಭೂಮಿಯು ನಿರ್ಜೀವವಾಗಿರುವುದನ್ನು (ಬರಡಾಗಿರುವುದನ್ನು) ನೀನು ನೋಡುವುದಿಲ್ಲವೇ? ಅದರ ಮೇಲೆ ನೀರು (ಮಳೆ) ಸುರಿದಾಗ ಅದು ಚಿಗುರಿ, ಪ್ರತಿಯೊಂದು ಬಗೆಯ ಸುಂದರ ಸಸ್ಯಗಳನ್ನು ಬೆಳೆಸುತ್ತದೆ. ಅದನ್ನು ಜೀವಂತಗೊಳಿಸಿದವನು

ಸತ್ತವರನ್ನು ಜೀವಂತಗೊಳಿಸಲು ಖಂಡಿತವಾಗಿಯೂ ಸಮರ್ಥನಾಗಿದ್ದಾನೆ.

ಅತ್ಯಂತ ತುಚ್ಛವಾದ ವೀರ್ಯದ ಒಂದು ಹನಿಯಿಂದ ಮನುಷ್ಯನನ್ನು ಸೃಷ್ಟಿಸಿದವನು, ಪುನರುತ್ಥಾನ ದಿನದಂದು ಅವನನ್ನು ಮತ್ತೆ ಎಬ್ಬಿಸಿ, ಅವನ ವಿಚಾರಣೆ ಮಾಡಿ, ಅವನಿಗೆ ಪೂರ್ಣ ಪ್ರತಿಫಲವನ್ನು ನೀಡಲು ಸಮರ್ಥನಾಗಿದ್ದಾನೆ—ಒಳಿತಾದರೆ ಒಳಿತು, ಕೆಡುಕಾದರೆ ಕೆಡುಕು.

ಆಕಾಶಗಳನ್ನು, ಭೂಮಿಯನ್ನು ಮತ್ತು ನಕ್ಷತ್ರಗಳನ್ನು ಸೃಷ್ಟಿಸಿದವನು, ಮನುಷ್ಯನನ್ನು ಪುನಃ ಸೃಷ್ಟಿಸಲು ಸಮರ್ಥನಾಗಿದ್ದಾನೆ; ಏಕೆಂದರೆ ಮನುಷ್ಯನನ್ನು ಎರಡನೇ ಬಾರಿಗೆ ಸೃಷ್ಟಿಸುವುದು ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸುವುದಕ್ಕಿಂತ ಸುಲಭವಾಗಿದೆ.

## ಪುನರುತ್ಥಾನ ದಿನದಂದು ಏನಾಗುತ್ತದೆ?

(ಪುನರುತ್ಥಾನ ದಿನದಂದು) ಪರಿಪಾಲಕನು (ಅಲ್ಲಾಹು) ಸೃಷ್ಟಿಗಳನ್ನು ಅವರ ಸಮಾಧಿಗಳಿಂದ ಎಬ್ಬಿಸುವನು. ನಂತರ ಅವರ ಕರ್ಮಗಳ ಬಗ್ಗೆ ವಿಚಾರಣೆ ನಡೆಸುವನು. ಸತ್ಯದಲ್ಲಿ ವಿಶ್ವಾಸವಿಟ್ಟು ಪ್ರವಾದಿಗಳನ್ನು ಸತ್ಯವೆಂದು ಒಪ್ಪಿಕೊಂಡವರು ಯಾರೋ ಅವರನ್ನು ಅವನು ಸ್ವರ್ಗಕ್ಕೆ ಸೇರಿಸುವನು. ಅದು ಎಂತಹ ಸ್ವರ್ಗವೆಂದರೆ, ಅಲ್ಲಿ ಮನುಷ್ಯನ ಕಲ್ಪನೆಗೆ ನಿಲುಕದ ಮಹೋನ್ನತವಾದ ಮತ್ತು ಶಾಶ್ವತವಾದ ಸುಖವಿರುತ್ತದೆ. ಸತ್ಯವನ್ನು ನಿಷೇಧಿಸಿದವರನ್ನು ಅವನು ನರಕಕ್ಕೆ ಸೇರಿಸುವನು.

ಅದು ಎಂತಹ ನರಕವೆಂದರೆ, ಅಲ್ಲಿ ಮನುಷ್ಯನ ಕಲ್ಪನೆಗೆ ಮೀರಿದ ಶಾಶ್ವತವಾದ ಶಿಕ್ಷೆ ಇರುತ್ತದೆ. ಮನುಷ್ಯನು ಸ್ವರ್ಗ ಅಥವಾ ನರಕವನ್ನು ಪ್ರವೇಶಿಸಿದ ನಂತರ, ಅವನು ಎಂದಿಗೂ ಸಾಯುವುದಿಲ್ಲ. ಅವನು ಆ ಸುಖದಲ್ಲಿ ಅಥವಾ ಶಿಕ್ಷೆಯಲ್ಲಿ ಶಾಶ್ವತವಾಗಿ ವಾಸಿಸುವನು.

❊❊❊

# ಪರಿವಿಡಿ


ಇಸ್ಲಾಂ - ಸರ್ವಲೋಕಗಳ ಪರಿಪಾಲಕನ ಧರ್ಮ......................2

ಮಸ್ಜಿದುಲ್-ಹರಾಮ್ ಮತ್ತು ಮಸ್ಜಿದು-ನ್ನಬವಿಯ ಧಾರ್ಮಿಕ ವ್ಯವಹಾರಗಳ ಅಧ್ಯಕ್ಷತೆಯ ಅಡಿಯಲ್ಲಿರುವ ವೈಜ್ಞಾನಿಕ ಸಮಿತಿ ......................................................................2

ನಿನ್ನ ರಬ್ಬ್ (ಪರಿಪಾಲಕ) ಯಾರು? ..............................................2

ಸರ್ವಲೋಕಗಳ ರಬ್ಬ್ (ಪರಿಪಾಲಕ)ನ ಗುಣಲಕ್ಷಣಗಳೇನು? ......................................................................................................3

ನಮ್ಮ ಮೇಲೆ ನಮ್ಮ ಪರಿಪಾಲಕನಿಗೆ ಇರುವ ಹಕ್ಕು ಏನು?...5

ಮನುಷ್ಯರಿಗೆ ತಮ್ಮ ಪರಿಪಾಲಕನ ಮೇಲೆ ಇರುವ ಹಕ್ಕು ಏನು? ..............................................................................................5

ನಮ್ಮ ಅಸ್ತಿತ್ವದ ಉದ್ದೇಶವೇನು? ನಮ್ಮನ್ನು ಏಕೆ ಸೃಷ್ಟಿಸಲಾಯಿತು?.......................................................................6

ನಾವು ನಮ್ಮ ಪರಿಪಾಲಕನನ್ನು ಹೇಗೆ ಆರಾಧಿಸಬೇಕು? .........7

ಪರಿಪಾಲಕನ ಬಳಿ ಸ್ವೀಕಾರಾರ್ಹ ಧರ್ಮ ಯಾವುದು?...........8

ಇಸ್ಲಾಂ ಧರ್ಮದ ಮೂಲಭೂತ ತತ್ವಗಳು ಮತ್ತು ಆಧಾರಸ್ತಂಭಗಳು ಯಾವುವು?............................................................8

ಇಸ್ಲಾಂ ಒಂದು ನಿರ್ದಿಷ್ಟ ಜನಾಂಗ ಅಥವಾ ಕುಲಕ್ಕೆ ಸೇರಿದ ಧರ್ಮವೇ? ..................................................................................... 10

ಜನರು ಪ್ರವಾದಿಗಳ (ಅವರ ಮೇಲೆ ಶಾಂತಿಯಿರಲಿ) ಸತ್ಯಸಂಧತೆಯನ್ನು ತಿಳಿಯುವುದು ಹೇಗೆ?.................................... 10

ಪವಿತ್ರ ಕುರ್‌ಆನ್ ಎಂದರೇನು?................................................... 11

ಪುನರುತ್ಥಾನ ಮತ್ತು ವಿಚಾರಣೆಗೆ ಪುರಾವೆ ಏನು?................. 12

ಪುನರುತ್ಥಾನ ದಿನದಂದು ಏನಾಗುತ್ತದೆ? .................................. 13


❋❋❋

رئاسة الشؤون الدينية
بالمسجد الحرام والمسجد النبوي

# رسالة الحرمين

# Message of The Two Holy Mosques

Guidance content for the visitors of the Holy Mosque and the Prophet's Mosque in languages.